ನಗರಸಭೆ ಮತ್ತು ಪುರಸಭಾ ವ್ಯಾಪ್ತಿಗೆ ಸಂಬಂಧಿಸಿದ ಭೂ ಪರಿವರ್ತನೆಗಾಗಿ ಬಂದ ಅರ್ಜಿಗಳು.

101(158) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲೆಗಳಿಂದ ನಗರಸಭೆ ಮತ್ತು ಪುರಸಭಾ ವ್ಯಾಪ್ತಿಗೆ ಸಂಬಂಧಿಸಿದ ಭೂ ಪರಿವರ್ತನೆಗಾಗಿ ಅರ್ಜಿಗಳು ಸರ್ಕಾರಕ್ಕೆ ಬರುವುದರಿಂದ ಸಣ್ಣ ಸಣ್ಣ ಭೂ ಪರಿವರ್ತನೆಗೆ (0.05 ರಿಂದ 0.10 ಸೆಂಟ್ಸ್) ಅರ್ಜಿ ಸಲ್ಲಿಸಿದವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ 0.05ರಿಂದ 0.10 ಸೆಂಟ್ಸ್ ಭೂ ಪರಿವರ್ತನೆಯ ಅಧಿಕಾರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಏವರ ನೀಡುವುದು.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

ಅ) ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಪರಿವರ್ತಿಸುವ ಅಧಿಕಾರವು ಕರ್ನಾಟಕ ಭೂ ಕಂದಾಯ ಅಧಿನಿಯಮದಡಿ ಕಂದಾಯಾಧಿಕಾರಿಗಳಿಗೆ ಇರುವುದು. ಭೂ ಪರಿವರ್ತನೆಯು ಒಂದು ನಿರ್ದಿಷ್ಟವಾದ ಭೂ ಉಪಯೋಗಕ್ಕೆ ಅಂದರೆ, ವಸತಿ, ವಾಣಿಜ್ಯ, ಕೈಗಾರಿಕಾ ಮುಂತಾದವು ಇದ್ದರೆ ಆಗ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಅಡಿ ಇರುವ ಅವಕಾಶಗಳಂತೆ ನಂತರದ ಅನುಮತಿಯನ್ನು ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆಯಬೇಕಾಗುತ್ತದೆ. ಭೂ ಉಪಯೋಗ ಬದಲಾವಣೆ ಕೋರಿರುವ ಮನವಿಯು ಸರ್ಕಾರದಿಂದ ಅಂಗೀಕೃತಗೊಂಡ ಸ್ಥೂಲಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆಯಂತೆ ಹೊಂದಿಕೆಯಾಗದಿದ್ದರೆ ಅಂತಹ ಅರ್ಜಿಗಳ ಸರ್ಕಾರಕ್ಕೆ ಬರುತ್ತದೆ.

ಆ) ಸದರಿ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಕೆ.ಐ.ಎ.ಡಿ.ಬಿ.ಯಿಂದ ಸಣ್ಣ ಕೈಗಾರಿಕೆಗಳಿಗೆ ನೀಡಿರುವ ಜಮೀನು.

102(159) ಶ್ರೀ ಯು.ಆರ್. ಸಭಾಪತಿ(ಉಡುಪಿ) :— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?